ಬೆಕ್ಕು. ಹಾಲಿಗಾಗಿ ಗಡಿಗೆ, ಕುಡಿಕೆಗಳನ್ನು ಪಂಜದಿಂದ ಕೆರೆಯುತ್ತಿತ್ತು. ನನ್ನನ್ನು ನೋಡಿ, ಕಾಲಬಳಿಗೆ ಬಂದಿತು. ಹಸಿವೆಯೇನೆ ಅಂದೆ. ಮಿಯಾಂ ಅಂದಿತು. ನೆಲುವಿನ ಮೇಲಿಟ್ಟಿದ್ದ ಹಾಲ್ಗಡಿಗೆ ಇಳಿಸಿ, ಚಟ್ಟದ (ಮಣ್ಣಿನ ಮುಚ್ಚಳ) ತುಂಬ ಸುರುವಿದೆ. ಹಣತೆಯನ್ನು ಗೂಡಿನಲ್ಲಿಟ್ಟು ಹಾಸಿಗೆ ಹತ್ತಿದೆ. ಕಾಲ ಬಳಿಯಿದ್ದ ಬಟ್ಟೆಯನ್ನು ಎದೆಮಟ್ಟಕ್ಕೆ ಎಳೆದುಕೊಂಡೆ. ಬಳ್ಳಿ ಸಹಿತವಿದ್ದ ಹೂ ಎದೆ ಮೇಲಿರುವುದು ಕಂಡಿತು.

ಯಮುನಾ ತಟಿ. ರಾತ್ರಿ. ಮಾಘಮಾಸ. ಶಕ್ಲಪಕ್ಷದ ನವಮಿ. ಮೊದಲೇ ಚಳಿ. ಬೆಳದಿಂಗಳಿಗೂ ಚಳಿ. ಎರಡು ಚಳಿಗಳಲ್ಲಿ ನಾನೂ ಅವನು. ಚಳಿಯೇ ಅಂದ. ನಿನ್ನಪ್ಪುಗೆ ಬೆಚ್ಚಗಿದೆ ಅಂದಿದ್ದೆ. ಆದರೂ ತನ್ನ ಮೇಲುದವನ್ನು ಹೊದೆಸಿದ. ಇದು ಬೆಳ್ಳಬಿಳಿಯಾಗಿದೆ. ಏನಾದರೊಂದು ಚಿತ್ತಾರವಿದ್ದರೆ ನೀನು ಹೊದೆದಾಗ ಸೊಬಗು ಅಂದು, ಎಲೆಯುದಿರಿದ್ದ ಬಳ್ಳಿಯೊಂದನ್ನು ಮುಟ್ಟಿದ. ಅದರಲ್ಲಿ ಒಂದು ಹೂ ಅರಳಿತು! ಅಕಾಲಿಕ ಪುಷ್ಪ! ಮಾಧವಾ ಇದು ನಿನ್ನ ಮಾಯೆ ಎಂದೆ. ಮಾಯೆಯಲ್ಲ. ಅರಳಿದ ಮನಸ್ಸಿನಿಂದ ನಿನ್ನ ಹೆಸರು ಹೇಳಿ ಮುಟ್ಟಿದೆ. ಅದು ಹೂಬಿಟ್ಟಿತು ಅಂದವನು, ಬಳ್ಳಿಯನ್ನು ಮುರಿದು ತಂದು ನಾನು ಹೊದ್ದಿದ್ದ ಅವನ ಮೇಲುದದ ಮೇಲಿಟ್ಟ. ಅದು ಪರಿಮಳಿಸುತ್ತ ಚಿತ್ರವಾಗಿ ಅದಕ್ಕೆ ಅಂಟಿಕೊಂಡಿತು. ಇಂದೂ ಆ ಪರಿಮಳವಿದೆಯೆ ಎಂದು ಮೂಸಿ ನೋಡಿದೆ. ನವಿಲುಗರಿಯ ವಾಸನೆ! ಇಷ್ಟು ಕಾಲವಾದರೂ ಇದು ಹೇಗೆ ಸಾಧ್ಯವೆಂದು ಅಚ್ಚರಿ. ಅವನ ನೆನಪೇ ಪರಿಮಳ. ಇನ್ನು ಅವನದಾದುದೆಲ್ಲವೂ ಪರಿಮಳಯುಕ್ತವೆ ತಾನೆ! ನನ್ನಲ್ಲಾವ ಪರಿಮಳ? ಉಸಿರನ್ನು ನಿಡಿದಾಗಿ ಎಳೆದುಕೊಂಡೆ. ಅವನು ರಥವೇರಿ ಹೊರಟಾಗ ಎದ್ದ ಧೂಳಿನಲ್ಲಿ ಕಲೆತ ತುಳಿಸಿ ಪರಿಮಳ ಪುಪ್ಪುಸ ತುಂಬಿಕೊಂಡಿತು.

ಮೂಡಲಿಗೆ ಕಾಲುಚಾಚಿ ಮಲಗುತ್ತಿದ್ದೆ. ಕಿಟಕಿ ಇದ್ದುದೇ ಆ ದಿಕ್ಕಿಗೆ. ಚಂದ್ರ ಕಾಣಬೇಕು; ಬೆಳದಿಂಗಳು ನನ್ನನ್ನು ಹೊದೆಯಬೇಕು. ಆಗ ಮಾತ್ರ ಸುಖನಿದ್ದೆ, ಕನಸು. ಅವನು ಹೀಗೆ ಹೇಳಿದಂದಿನಿಂದ ಈ ಪರಿ. 'ಪಡುವಲಿಗೆ ತಲೆಯಿಟ್ಟು ಮಲಗಬೇಡ. ಚಿಂತೆ ಉಂಟಾಗುತ್ತದೆಂದು ಹೇಳುತ್ತಾರೆ' ಎಂದು ಅಮ್ಮ ಹೇಳುತ್ತಿದ್ದಳು. ಈಗ ಅವಳ ಮಾತು ನಿಜ ಅನ್ನಿಸುತ್ತಿದೆ.

ಕೃಷ್ಣಪಕ್ಷದಲ್ಲಿ ಎಲ್ಲಿ ಚಂದ್ರ, ಎಲ್ಲಿ ಬೆಳದಿಂಗಳು? ಶುಕ್ಲಪಕ್ಷದ ಅಷ್ಟಮಿಯ ಆಚೆಯಲ್ಲವೆ ಸರಿಬೆಳದಿಂಗಳು? ಎಂದಾಗ, ಮನಸ್ಸಿನ ಚಂದಿರನಿಗೆ ಯಾವ ಪಕ್ಷವೂ ಇರದು. ಅಲ್ಲಿ ಪೂರ್ಣಚಂದ್ರನನ್ನು ಇರಿಸಿಕೊಂಡಿದ್ದರೆ ಅಂದಿದ್ದ. ದಿಟ ಅವನ ಮಾತು.

ಚೈತ್ರದಿಂದ ಫಾಲ್ಗುಣದವರೆಗೆ ನಾನು ಮಲಗುವ ಕೋಣೆಯ ಕಿಟಕಿ ಮುಚ್ಚಿದ್ದುದಿಲ್ಲ. ಹಿಮಗಾಲ, ಚಳಿಗಾಲ ಬಂತೆಂದರೆ ಅಮ್ಮನದು ಒಂದೇ ಮಾತು 'ನೆಗಡಿಯಾದಾತು, ಕಿಟಕಿ ಮುಚ್ಚು'. ಆದರೆ, ನಾನು ಮುಚ್ಚಿದ್ದೇ ಇಲ್ಲ. ನೆಗಡಿ ಆಗುವುದು, ಅಮ್ಮ ಕಷಾಯ ಕೊಡುವುದು ಇದ್ದದ್ದೇ.

ಪೂರ್ಣೇಂದು ಲೋಕಪ್ರಿಯ. ನನಗೆ ನವಮೀಚಂದ್ರನೆಂದರೆ ಸೆಳೆತ. ಅದರ ಸೊಬಗನ್ನು ಅರಿವಿಗೆ ತಂದವನು ಅವನು. ಕಾರ್ತೀಕ ಶುಕ್ಲ ನವಮೀಚಂದ್ರನ ಚೆಲುವನ್ನು ಅವನ ಬಣ್ಣನೆಯಲ್ಲಿಯೇ ಆನಂದಿಸಬೇಕು. 'ಶಿವನ ಜಟೆಗೆ ಸೌಂದರ್ಯ ಈ ಚಂದ್ರನೇ. ಶಿವನ ಮುಡಿಯ ಗಂಗೆ ತುಂತುರು ತುಂತುರು ಚಿಮ್ಮಿಸಿ ಚಿಮ್ಮಿಸಿ ತೊಳೆದು ಕಾಂತಿವಂತಗೊಳಿಸುತ್ತಾಳೆ. ಆದ್ದರಿಂದಲೇ ನವಮೀಚಂದ್ರನಿಗೆ ಆ ಆಕರ್ಷಣೆಯ ಕಳೆ. ಶಿವೆಗೂ ನವಮೀಚಂದ್ರನೆಂದರೆ ಇಷ್ಟ...' ಈ ಮಾತನ್ನು ಯಶೋದಮ್ಮನಿಗೆ ಹೇಳಿದ್ದೆ. ಅವಳು 'ಅವನೇ ಮರುಳ. ನಿನ್ನನ್ನೂ ಮಾಡಿಬಿಟ್ಟನೆ' ಅಂದಿದ್ದಳು. ನೀನಾದುದಿಲ್ಲವೊ ಅಂದುದಕ್ಕೆ ಅವಳು ಹೇಳಿದ್ದು, 'ಯಾರಾಗುವುದಿಲ್ಲವೆ ತಾಯಿ?'

ಕಿಟಕಿಯತ್ತ ನೋಡಿದೆ. ಬೆಳದಿಂಗಳಿತ್ತು, ಚಂದ್ರ ಕಾಣಲಿಲ್ಲ. ಅವನಿದ್ದಾಗ ಅದೆಷ್ಟು ಹೊತ್ತು ಕಿಟಕಿಯಲ್ಲಿ ಕಾಣುತ್ತಲಿದ್ದ! ಅವನಿಲ್ಲವೆಂದ ಮೇಲೆ ಎಲ್ಲಾ ಹೀಗೆಯೇನೊ?! ಸಂಜೆಯಾಗಿ, ದನಗಳು